ಇದ್ದಾರೆ, ಅವರ ಹತ್ತಿರ ದಾಖಲಾತಿಗಳನ್ನು ಕೊಟ್ಟುಬಿಡಿ, ಅವರು ಮಾಡಿಕೊಡುತ್ತಾರೆ. ಈಗ ಶ್ರೀ ರಾಮರೆಡ್ಡಿಯವರು ಮಾತನಾಡಿ.

4. ಶಿಡ್ಲಘಟ್ಟದಲ್ಲಿ ರೈತರಿಗೆ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡಿರುವ ಬಗ್ಗೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಕೃಷಿ ಇಲಾಖೆಯ ಮಂತ್ರಿಗಳು ಇರಬೇಕಾಗಿತ್ತು, ಕಳಪೆ ರಸಗೊಬ್ಬರಗಳನ್ನು ವಿತರಣೆ ಮಾಡತಕ್ಕಂತಹ ಘಟನೆಗಳು ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಅದರ ಭಾಗವಾಗಿ ನಿನ್ನೆ ಶಿಡ್ಲಘಟ್ಟದಲ್ಲಿ ರೈತರಿಗೆ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡಿ ಅದರಿಂದಾಗಿ ಸಂಪೂರ್ಣ ಹೊಲ ಮತ್ತು ಗದ್ದೆ ನಾಶ ವಾಗಿರುವುದರ ವಿರುದ್ಧ ಅದರ ಬಗ್ಗೆ ಕೇಳಲಿಕ್ಕೆ ಬಂದಂತಹ ಸಂದರ್ಭದಲ್ಲಿ ಆ ಮಾಲೀಕರ ಪರವಾಗಿ ಪೊಲೀಸ್‌ನವರು ನಿಂತುಕೊಂಡು ರೈತರ ಮೇಲೆ ಲಾಠಿಚಾರ್ಜ್ ಮಾಡಿರುವಂತಹ ಘಟನೆಯೂ ಕೂಡ ನಡೆದಿರುತ್ತದೆ. ಇವತ್ತು ಬೆಂಗಳೂರು ಜಿಲ್ಲೆಯ ರೈತರುಗಳು ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ, ಏಕೆಂದರೆ, ಇಡೀ ರಾಜ್ಯದಲ್ಲಿ ಕಳಪೆ ರಸಗೊಬ್ಬರ ವಿತರಣೆ ಮಾಡುತ್ತಿರುವಂತಹ ಒಂದು ದೊಡ್ಡದಾದಂತಹ ಜಾಲ ಹುಟ್ಟಿ ಕೊಂಡಿದೆ. ಅವರಿಗೆ ಎಲ್ಲಾ ರೀತಿಯಿಂದಲೂ ರಕ್ಷಣೆ ಸಿಗುತ್ತಿದೆ. ಇದರ ಪರಿಣಾಮವಾಗಿ ರೈತರು ಇವತ್ತು ಸಂಪೂರ್ಣವಾಗಿ ನಾಶವಾಗುತ್ತಿದ್ದಾರೆ. ಸಾಲ ಮತ್ತು ಸೋಲವನ್ನು ಮಾಡಿ ರಸಗೊಬ್ಬರಗಳನ್ನು ತೆಗೆದುಕೊಂಡು ಹೋಗಿ ಹಾಕಿದರೆ ಅವು ಯಾವುದಕ್ಕೂ ಇವತ್ತು ನಿಷ್ಪ್ರಯೋಜನವಾಗಿ ಗದ್ದೆಗಳು ನಾಶವಾಗಿ ಇವತ್ತಿನ ದಿವಸ ರೈತರು ಸಾಲಗಾರನಾಗಿ ಸಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಇವತ್ತು ನಿನ್ನೆ ಈ ಘಟನೆಯೂ ಪ್ರಾರಂಭವಾಗಿದೆ. ಶಿಡ್ಲಘಟ್ಟದಲ್ಲಿ ಲಾಠಿಚಾರ್ಜ್ ಆಗಿದೆ, ಹತ್ತಾರು ಜನ ರೈತರಿಗೆ ಹೊಡೆತವಾಗಿದೆ, ಇದು ಇಡೀ ರಾಜ್ಯದಲ್ಲಿ ಇವತ್ತು ಮರುಕಳುಹಿಸುವಂತಹ ಸಂದರ್ಭವಿದೆ. ಆದ್ದರಿಂದ ನಾನು ಇದನ್ನು ಸರ್ಕಾರದ ಗಮನಕ್ಕೆ ತಂದು ತಕ್ಷಣ ಇಡೀ ರಾಜ್ಯದಲ್ಲಿ ಈ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡತಕ್ಕಂತಹ ಕಂಪನಿಗಳು ಯಾವುದು ಇವೆ ಅವುಗಳಿಗೆ ಪರವಾನಗಿ ಎಲ್ಲಿಂದ ಬಂತು? ಪರವಾನಗಿ ಇಲ್ಲದೆ ಇರುವಂತಹವರು ಇವತ್ತು ಬ್ಲಾಕ್‌ನಲ್ಲಿ ಗೊತ್ತಿಲ್ಲದಂತೆ ಅಂಗಡಿಗಳಲ್ಲಿ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ, ಅವರಿಗೆ ಯಾವ ಡಿಪಾರ್ಟ್‌ಮೆಂಟ್‌ನವರು ಅನುಮತಿಯನ್ನು ಕೊಟ್ಟಿದ್ದಾರೆ? ಸರ್ಕಾರ ಬೇರೆ ಏನಾದರೂ ಅವರಿಗೆ ಲೈಸೆನ್ಸ್ ಕೊಡತಕ್ಕಂತಹ ವ್ಯವಸ್ಥೆ ಏನಾದರೂ ಮಾಡಿದೆಯೋ? ಯಾವ ಆಧಾರದ ಮೇಲೆ ಅವರು ಮಾರಾಟ ಮಾಡುತ್ತಿದ್ದಾರೆ? ಮಾರಾಟ ಮಾಡುವಂತಹವರ ಮೇಲೆ ಕಳಪೆ ರಸ ಗೊಬ್ಬರಗಳನ್ನು ಮಾರಿದರೆ ಅದನ್ನು ನಿಯಂತ್ರಣ ಮಾಡುವ ಬಗ್ಗೆ ಸರ್ಕಾರ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ಯೋಚನೆ ಮಾಡಿದೆ. ಇದರ ಬಗ್ಗೆ ದಯವಿಟ್ಟು ಸರ್ಕಾರ ಹೇಳಬೇಕು, ಏಕೆಂದರೆ ಇದು ರೈತಸಮುದಾಯಕ್ಕೆ ಮತ್ತೊಂದು ಹೊಡೆತವಾಗಿದೆ, ಒಂದು ಕಡೆ ಬಿತ್ತನೆಯ ಸಂದರ್ಭದಲ್ಲಿ ಕಳಪೆ ಬೀಜಗಳು ಈಗ ರಸಗೊಬ್ಬರಗಳು ಕಳಪೆಯದಾಗಿದೆ. ರಸಗೊಬ್ಬರಗಳು ಕಳಪೆ, ಬಿತ್ತನೆಯ ಬೀಜಗಳು ಸಹ ಕಳಪೆಯದಾಗಿದೆ, ಪೆಸ್ಟಿಸೈಡ್ಸ್ ಕಳಪೆಯದಾಗಿದೆ. ಎಲ್ಲವೂ ಕಳಪೆಯಾಗಿ ಈಗಾಗಲೇ ಸಾಯಿಸುತ್ತಿರುವಂತಹ ರೈತರಿಗೆ ಇನ್ನೂ

ಬೇಗ ಸಾಯಲಿ ಎನ್ನುತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಶಿಡ್ಲಘಟ್ಟದಲ್ಲಿ ಯಾರು ರೈತರ ಮೇಲೆ ಲಾಠಿಚಾರ್ಜ್ ಮಾಡಿದ್ದಾರೆ ಅವರ ಮೇಲೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು, ಕಳಪೆ ರಸಗೊಬ್ಬರಗಳ ಜಾಲವನ್ನು ಪತ್ತೆಹಚ್ಚಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು, ಅವರಿಗೆ ಸೂಕ್ತವಾದಂತಹ ಶಿಕ್ಷೆಯನ್ನು ಕೊಡಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಿನ್ನೆ ಈ ವಿಷಯ ನನ್ನ ಗಮನಕ್ಕೆ ಬಂತು. ಶಿಡ್ಲಘಟ್ಟದಲ್ಲಿ ಒಂದು ಅಂಗಡಿಯಲ್ಲಿ ಡಿಎಪಿ ಗೊಬ್ಬರಕ್ಕೆ ಕಲ್ಲುಗಳನ್ನು (ಬೆಣಚುಕಲ್ಲು) ಮಿಕ್ಸ್ ಮಾಡಿ ಅದು ಸ್ವಲ್ಪ ಬೆಳ್ಳಗೆ ಇರುತ್ತದೆ, ಗೊತ್ತಾಗುವುದಿಲ್ಲ. ಅದನ್ನು ಸೇರಿಸಿ ಮಾರಿದ್ದಾರೆ ಎನ್ನುವಂತಹ ವಿಚಾರ ನನ್ನ ಗಮನಕ್ಕೆ ಬಂದಿದೆ. ನಾನು ಆಗಲೇ ಸಂಬಂಧಪಟ್ಟಂತಹ ರಕ್ಷಣಾಧಿಕಾರಿಗಳಿಗೆ ಫೋನ್ ಮೂಲಕ ಮಾತನಾಡಿ ಅವರುಗಳನ್ನು ಅರೆಸ್ಟ್ ಮಾಡಿಸಿ ಈಗ ಅವರುಗಳು ಜೈಲಿನಲ್ಲಿದ್ದಾರೆ. ಎಲ್ಲಾ ರೈತರುಗಳು ಸೇರಿ ಗಲಾಟೆಯಾದಾಗ, ಆಗ ಸ್ವಲ್ಪ ಲಘು ಲಾಠಿಚಾರ್ಜ್ ಆಗಿದೆ, ಅದನ್ನು ನಿಯಂತ್ರಣ ಮಾಡುವುದಕ್ಕೆ ಸ್ವಲ್ಪ ಲಾಠಿಚಾರ್ಜ್ ಮಾಡಿದ್ದಾರೆ. ಅವರಿಂದ ಏನಾದರು ತಪ್ಪಾಗಿದ್ದರೆ ಅತಿರೇಕಕ್ಕೆ ಹೋಗಿದ್ದರೆ ಅವರ ಮೇಲೆ ಕ್ರಮವನ್ನು ಜರುಗಿಸುವ ಬಗ್ಗೆ ನಾವೇನೂ ಹಿಂದಕ್ಕೆ ಹೋಗುವುದಿಲ್ಲ. ರೈತರ ಮೇಲೆ ನಾವು ಯಾವುದೇ ಪರಿಸ್ಥಿತಿಯಲ್ಲಿಯೂ ಕೂಡ ಕೈ ಎತ್ತಬಾರದು ಅದನ್ನು ನಾನು ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಡೀ ರಾಜ್ಯದಲ್ಲಿ ನಾನೂ ಕೂಡ ಅನೇಕ ಸಂಘಸಂಸ್ಥೆಗಳಲ್ಲಿ ಗೊಬ್ಬರದ ಕಂಪನಿಗಳಲ್ಲಿ ಅಧ್ಯಕ್ಷನಾಗಿದ್ದೇನೆ. ಪ್ರಪಂಚದಲ್ಲಿ ಅತಿ ದೊಡ್ಡದಾದ ಕಂಪನಿಗಳಾದ ಇಫ್ಕೋ ಮತ್ತು ಕ್ರಿಫ್ಕೋ ಕಂಪನಿಗಳಲ್ಲಿ ಅಧ್ಯಕ್ಷನಾಗಿದ್ದೇನೆ, ಸುಮಾರು 21 ವರ್ಷಗಳ ಕಾಲ ಈ ರಾಜ್ಯದಲ್ಲಿ ಗೊಬ್ಬರಗಳ ಮಾರಾಟವನ್ನು ನಿಯಂತ್ರಣ ಮಾಡುವುದರಲ್ಲಿ, ರಾಜ್ಯ ಸಹಕಾರ ಮಾರಾಟ ಮಂಡಳಿಯ ಮೂಲಕ ಮಾಡುತ್ತಿದ್ದೇವೆ. ಇದರಲ್ಲಿ ಕೆಲವು ಎಂಪಿಕೆ ಗೊಬ್ಬರಗಳನ್ನು ಕೆಲವು ಪ್ರೈವೇಟ್ ಏಜೆನ್ಸಿಯವರು ಮಿಕ್ಸ್ ಮಾಡುತ್ತಾರೆ. ಇವರು ಯಾವ ಡಿಎಪಿಯಿಂದ ತೆಗೆದುಕೊಂಡು ಹೋಗಿ ಮಿಕ್ಸ್ ಮಾಡಿ ಮಾರುವಂತಹದ್ದನ್ನು ಮಾಡುತ್ತಾರೆ. ಅಲ್ಲಿ ಈ ತರಹ ಕಳಪೆಯಾಗುತ್ತದೆ. ಯಾವ ಕಂಪನಿಗಳಿಂದ ಮಾಡಿದ್ದಾವೋ ಅವು ಸಾಧ್ಯವಿಲ್ಲ. ಇಲ್ಲದೆ ಇದ್ದರೆ ಯಾರೂ ಸಗಟು ವ್ಯಾಪಾರಸ್ತರಿದ್ದಾರೆ, ಆ ವ್ಯಾಪಾರಸ್ಥರು ಅಲ್ಲಿ ಮಿಕ್ಸ್ ಮಾಡುವುದಕ್ಕೆ ಅವಕಾಶವಿದೆ. ಬ್ಯಾಗ್ ಹೂಲಿಯುವಂತಹ ಮಿಷನ್ ಕೂಡ ಅವನ ಹತ್ತಿರ ಇರಬೇಕು; ಇಲ್ಲದೇ ಇದ್ದರೆ ಆ ಮಿಷನ್ ಕೂಡ ಬಹಳ ಮುಖ್ಯವಾದಂತಹ ಐಟಂ ಆಗಿದೆ ಆ ಬ್ಯಾಗ್ ಮಾಡಲಿಕ್ಕೆ. ಆ ತರಹ ಯಾರೇ ಆಗಿದ್ದರೂ ಕೂಡ ಇಡೀ ರಾಜ್ಯದಲ್ಲಿ ಇವತ್ತೇ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಎಲ್ಲಾ ಜಾಯಿಂಟ್ ಡೈರೆಕ್ಟರ್‌ಗಳಿಗೆ ಸೂಚನೆ ಕೊಡುತ್ತೇನೆ. ಈ ತರಹ ಮಾಹಿತಿಯನ್ನು ತರಿಸಿಕೊಂಡು ಎಲ್ಲಿ ಗೊಬ್ಬರಗಳು ಈ ತರಹ ಆಗಿದ್ದರೆ ಅವರ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸುತ್ತೇವೆಂಬ ಮಾತನ್ನು ಹೇಳುತ್ತೇನೆ. ಶಿಡ್ಲಘಟ್ಟದಲ್ಲಿ ನಡೆದಿರುವ ಘಟನೆ ಬಗ್ಗೆ ಅವರನ್ನು ಜೈಲಿಗೇ ಹಾಕಿಸಿದ್ದೇವೆ, ಅವರ ಮೇಲೂ ಕೂಡ ಅದೇ ರೀತಿಯಲ್ಲಿ ಕ್ರಮವನ್ನು ಜರುಗಿಸುತ್ತೇವೆನ್ನುವಂತಹ ಮಾತನ್ನು ಹೇಳುವುದರ ಜೊತೆಗೆ ನಾನು ಆಗಲೇ ಉತ್ತರವನ್ನು ಕೊಟ್ಟಿದ್ದೇನೆ, ಸೀಡ್ಸ್ ಬಗ್ಗೆ ಐದು ಜಾಗದಲ್ಲಿ ಈ ರೀತಿಯಾಗಿದೆ, ಅದು ಪ್ರೈವೇಟ್ ಕಂಪನಿಗಳು ಏನಾಯಿತು? ಆಂಧ್ರದಿಂದ ಬಂದು ಒಂದು

ಲಾರಿಯಲ್ಲಿ ತಂದು ಗೌರಿಬಿದನೂರಿನಲ್ಲಿ ಮಾರಿಕೊಂಡು ಹೋದರು. ಅದನ್ನು ನಮ್ಮ ರೈತರು ಕೆಲವಾರು ವರ್ಷಗಳಿಂದ ತೆಗೆದುಕೊಳ್ಳುತ್ತಿದ್ದರು. ಅದನ್ನು ತೆಗೆದುಕೊಂಡು ಹೋಗಿ ಹೂಳಿದರು ಆಗ ಸ್ವಲ್ಪ ಮೋಸವಾಗಿದೆ, ಯಾವ ನಮ್ಮ ಅಪ್ರೂವ್ಡ್ ಲಿಸ್ಟ್ ಅಫ್ ಸೀಡ್‌ಗ್ರೋಯರ್ಸ್ ಏನು ಇರುತ್ತಾರೆ, ಅವರ ಸೀಡ್ ಕಂಪನಿಗಳು ಏನು ಇರುತ್ತವೆ, ಆ ತರಹವಾದರೆ ಅವರ ಮೇಲೆ ಕ್ರಮವನ್ನು ಜರುಗಿಸುತ್ತೇವೆ, ಆ ಲೈಸೆನ್ಸ್‌ನ್ನು ರದ್ದು ಮಾಡುವಂತಹದ್ದರ ಬಗ್ಗೆ ಕೂಡ ನಾವು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ ಎಂಬುದರ ಬಗ್ಗೆ ತಮ್ಮ ಮೂಲಕ ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಶಿವಾನಂದ ನಾಯಕರ್‌ರವರು ಮಾತನಾಡಿ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ,.. ಸಾರ್ ಒಂದೇ ಒಂದು.

ಅಧ್ಯಕ್ಷರು : ದಯಮಾಡಿ ಇದಕ್ಕೆ ಅವಕಾಶವಿಲ್ಲ. ನೋ, ನೋ, ಮಾನ್ಯ ಶಿವಾನಂದ ನಾಯಕ್‌ರವರೇ ಮಾತನಾಡಿ.

5. ಹೊನ್ನಾವರ ತಾಲ್ಲೂಕಿನ ಶರಾವತಿ ಮತ್ತು ಉಂಬಳ ನದಿಗಳು ತುಂಬಿ ಹರಿಯುತ್ತಿದ್ದು. ತಗ್ಗು ಪ್ರದೇಶದಲ್ಲಿರುವ ಮನೆಗಳು ಬಿದ್ದು ಹೋಗಿರುವ ಕಡೆ ಪುನರ್ ವ್ಯವಸ್ಥೆ ಕಲ್ಪಿಸುವ ಬಗ್ಗೆ

ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕುದಿವಸಗಳಿಂದ ಹೊನ್ನಾವರದ ನಮ್ಮ ಕರಾವಳಿಯ ಉದ್ದಕ್ಕೂ ಮಳೆಯು ಜಾಸ್ತಿಯಾಗಿದೆ, ಅದರಲ್ಲಿ ವಿಶೇಷವಾಗಿ ಹೊನ್ನಾವರ ತಾಲ್ಲೂಕಿನ ಶರಾವತಿ ನದಿ ಮತ್ತು ಉಂಬಳ ನದಿ ತುಂಬಿ ಹರಿಯುತ್ತಿದೆ, ತಗ್ಗುಪ್ರದೇಶದಲ್ಲಿರುವಂತಹ ಸುಮಾರು 350 ಮನೆಗಳು ಈಗಾಗಲೇ ಬಿದ್ದು ಹೋಗಿವೆ. ತಗ್ಗುಪ್ರದೇಶದಲ್ಲಿರುವಂತಹ ಜನರು ಈಗಾಗಲೇ ಶಾಲೆ ಮತ್ತು ಬೇರೆ ಬೇರೆ ಗುಡ್ಡದಲ್ಲಿ ಸೇರಿಕೊಂಡಿದ್ದಾರೆ. ಇದುವರೆವಿಗೂ ಅಲ್ಲಿ ಗಂಜಿ ಕೇಂದ್ರದ ವ್ಯವಸ್ಥೆಯಾಗಿರುವುದಿಲ್ಲ. ಈಗಾಗಲೇ ಅಲ್ಲಿ ಬಿದ್ದು ಹೋಗಿರುವಂತಹ ಮನೆಗೆ ಪುನರ್ ವ್ಯವಸ್ಥೆ ಮಾಡುವಂತಹ ವ್ಯವಸ್ಥೆಯಾಗಬೇಕು. ಅದರ ಜೊತೆಗೆ ಗಂಜಿ ಕೇಂದ್ರವನ್ನು ತಕ್ಷಣ ತೆರೆಯುವಂತಹ ಒಂದು ಕೆಲಸ ಆಗಬೇಕು. ಇದೇರೀತಿ ಸಾಂಪ್ರದಾಯಿಕ ಮೀನುಗಾರಿಕೆ ಹೋದಂಥ ಮೂರು ಜನ ಮೀನುಗಾರರು ಸಮುದ್ರದ ಪಾಲಾಗಿದ್ದಾರೆ. ಅವರಲ್ಲಿ ಇಬ್ಬರು ತೀರಿಕೊಂಡಿದ್ದಾರೆ. ಅವರಿಗೆ ಪರಿಹಾರವನ್ನು ಕೊಡುವ ಕೆಲಸ ಆಗಬೇಕು ಇಲ್ಲಿ ಪ್ರತಿವರ್ಷ ಸಹ ಈ ರೀತಿ ಅನಾಹುತ ಆಗುತ್ತಿದೆ. ನಾನು ಮೊನ್ನೆ ಕೂಡ ಬಜೆಟ್‌ನಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಹೇಳಿದ್ದೇನೆ. ನಮ್ಮ ಕರಾವಳಿಯಲ್ಲಿ ಅತಿವೃಷ್ಟಿಯಿಂದ ಅತಿಹೆಚ್ಚು ಹಾನಿಯಾಗಿದೆ. ನಮಗೆ ಬರಕ್ಕಾಗಿ ಬರುವಂತಹ ಯಾವುದೇ ರೂಪದ ಯೋಜನೆ ಬರಲಿಲ್ಲ. ಕಳೆದ ಒಂದು ವಾರದಿಂದ ಮಳೆಯಿಂದ ಈ ರೀತಿಯ ತೊಂದರೆಯಾಗಿದೆ. ಸಾವಿರಾರು ಎಕರೆ ಭೂಮಿ ಸಹ ಹಾನಿಯಾಗಿದೆ ಮತ್ತು ತೋಟಗಳು ಇರುವಂತಹ ಪ್ರದೇಶಗಳಲ್ಲಿ ಅಲ್ಲಿರುವಂಥ ಅಡಿಕೆ, ತೆಂಗು ಮರಗಳು ಇವತ್ತು ಅತಿ ಹೆಚ್ಚು ಗಾಳಿ ಬೀಸಿದ್ದರಿಂದ ಅವೆಲ್ಲಾ ಮುರಿದುಬಿದ್ದಿವೆ. ಅದಕ್ಕೂ ಕೂಡ